ಆ) ಸದರಿ ಪ್ರಕ್ರಿಯೆ ಯಾವ ಹಂತದಲ್ಲಿದೆ

ಇ) ಸದರಿ ಕಾಲೇಜು ಕಟ್ಟಡವನ್ನು ಇಲಾಖೆಯು ಸ್ವಾಧೀನಕ್ಕೆ ಯಾವಾಗ ತೆಗೆದುಕೊಳ್ಳಲಾಗುವುದು?

ಶ್ರೀ ಡಿ ಮಂಜುನಾಥ (ಉನ್ನತ ಶಿಕ್ಷಣ ಸಚಿವರು)

ಅ),ಆ) ಕಟ್ಟಡದ ಒಟ್ಟು ಮೌಲ್ಯ ರೂ 70,34,465–00 ಪೈಕಿ ಸದರಿ ಕಟ್ಟಡವನ್ನು ಕಾಲೇಜಿಗೆ ಪಡೆಯಲು ಮೊದಲಿಗೆ ರೂ 1ಳ 89 ಲಕ್ಷಗಳನ್ನು ಭಾಗಶಃ ಪಾವತಿಸಲಾಗಿದೆ

ಇ) ಒಟ್ಟು ಮೌಲ್ಯದಲ್ಲಿ ಈಗಾಗಲೇ ಪಾವತಿಸಿರುವ ರೂ 19 89 ಲಕ್ಷಗಳನ್ನು ಹೊರತುಪಡಿಸಿ ಬಾಕಿ ಹಣವನ್ನು ಪಾವತಿಸಲು ಅನುದಾನ ದೊರಕಿಸಿಕೊಳ್ಳಲು ಪ್ರಯತ್ನಿಸಲಾಗುತ್ತಿದೆ ಅನುದಾನ ದೊರಕಿಸಿಕೊಂಡ ಕೂಡಲೇ ಇಲಾಖೆಯ ಸ್ವಾಧೀನಕ್ಕೆ ತೆಗೆದುಕೊಳ್ಳಲಾಗುವುದು

518(505) ಶ್ರೀ ಹೆಚ್ ಎಸ್ ಶಂಕರಲಿಂಗೇಗೌಡ (ಚಾಮರಾಜ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಮೈಸೂರು ವಿಶ್ವವಿದ್ಯಾನಿಲಯದ ನೌಕರ ವಸತಿ ಗೃಹಗಳನ್ನು ಹೊಂದಿರುವ ಮಾನಸ ಗಂಗೋತ್ರಿ ರಸ್ತೆಗಳ ಡಾಂಬರೀಕರಣಕ್ಕೆ ತಗಲುವ ವೆಚ್ಚವೆಷ್ಟು (ವಿವರ ನೀಡುವುದು)

ಆ) ಈ ವೆಚ್ಚವನ್ನು ಸರ್ಕಾರದಿಂದ ಭರಿಸಿ ರಸ್ತೆಗಳ ಡಾಂಬರೀಕರಣ ಮಾಡುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ರೂ 10 00 ಲಕ್ಷ

ಆ) ಮೈಸೂರು ವಿಶ್ವವಿದ್ಯಾಲಯಕ್ಕೆ ಮಂಜೂರು ಮಾಡಿರುವ ಅಭಿವೃದ್ಧಿ ಅನುದಾನದಿಂದ ಡಾಂಬರೀಕರಣಗೊಳಿಸಬೇಕಾಗುತ್ತದೆ

519(445) ಶ್ರೀ ಶಿವಾನಂದ ನಾಯಕ್ (ಭಟ್ಕಳ) ಮಾನ್ಯ ಧರ್ಮಸಿಂಗ್ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕೃಷಿ ಮೇಲಿನ ಬಡ್ಡಿ ಮನ್ನಾ ಮಾಡುವ ವಿಚಾರ ಸರ್ಕಾರದ ಮುಂದೆ ಇದೆಯೇ?

ಆ) ಕೃಷಿ ಸಾಲಕ್ಕಾಗಿ ಸ್ಟಾಂಪ್ ಡ್ಯೂಟಿ ಪ್ರಾರಂಭಿಸಿರುವುದನ್ನು ಸರ್ಕಾರ ಹಿಂತೆಗೆದುಕೊಳ್ಳುವುದೇ?

3) ರೈತರಿಗೆ ಬೆಳೆ ವಿಮೆ ಯೋಜನೆಯನ್ನು ಮುಂದುವರಿಸಲಾಗುವುದೆ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಸದ್ಯಕ್ಕೆ ಕೃಷಿ ಸಾಲಗಳ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವ ವಿಚಾರವು ಸರ್ಕಾರದ ಮುಂದೆ ಇರುವುದಿಲ್ಲ

ಆ) ಕೃಷಿ ಸಾಲಕ್ಕಾಗಿ ಮಾಡಲಾಗುವ ಅಡಮಾನ ಪತ್ರಕ್ಕೆ ಶೇಕಡಾ 0 5ರಷ್ಟು ಮುದ್ರಾಂಕ ಶುಲ್ಕ ವಿಧಿಸಲಾಗುತ್ತಿದೆ ಸದರಿ ಶುಲ್ಕವನ್ನು ಹಿಂತೆಗೆದುಕೊಳ್ಳುವ ಪ್ರಸ್ತಾವವು ಸರ್ಕಾರದ ಪರಿಶೀಲನೆಯಲ್ಲಿ ಇರುತ್ತದೆ ಇನ್ನೂ ಅಂತಿಮ ತೀರ್ಮಾನ ಕೈಗೊಂಡಿರುವುದಿಲ್ಲ

ಇ) ಹೌದು

521(334) ಶ್ರೀ ಶಿವಶಂಕರ ರೆಡ್ಡಿ ಎನ್ ಹೆಚ್ (ಗೌರಿಬಿದನೂರು) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಗೌರಿಬಿದನೂರು ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಮಸೀದಿಗಳಿಲ್ಲದೇ ಮುಸ್ಲಿಂ ಭಾಂದವರು ಪ್ರಾರ್ಥನೆ ಸಲ್ಲಿಸಲು ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಆ) ಹಾಗಿದ್ದಲ್ಲಿ ಪರಿಹಾರಕ್ಕೆ ಯಾವ ಕ್ರಮ ಕೈಗೊಂಡಿದೆ?

ಇ) ಸರ್ಕಾರ ಮಸೀದಿ ನಿರ್ಮಿಸಲು ಸಹಾಯ ಸಹಕಾರ ನೀಡುವುದೇ?

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಸಚಿವರು)

ಅ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ

ಆ) ಪ್ರಶ್ನೆ ಉದ್ಭವಿಸುವುದಿಲ್ಲ

ಇ) ನಿರ್ದಿಷ್ಟ ವಕ್ಫ್ ಸಂಸ್ಥೆಯಿಂದ ಇಂತಹ ಪ್ರಸ್ತಾವನೆ ಬಂದಲ್ಲಿ ಹಣದ ಲಭ್ಯತೆ ಆಧರಿಸಿ ಸಹಾಯ ಮಾಡಲಾಗುವುದು

522(559) ಶ್ರೀ ಡಾ॥ ಸುಧಾಕರ್ ಎಂ ಸಿ (ಚಿಂತಾಮಣಿ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಚಿಂತಾಮಣಿ ನಗರದ ಬಾಲಕರ ಸರ್ಕಾರಿ ಕಾಲೇಜಿನಲ್ಲಿ ಎಷ್ಟು ವಿಷಯಗಳನ್ನು ಬೋಧಿಸುತ್ತಿದ್ದಾರೆ ಎಂಬುದನ್ನು ತಿಳಿಸುವುದು

ಆ) ಎಲ್ಲಾ ವಿಷಯಗಳ ಕಾರ್ಯಭಾರವನ್ನು ನಿರ್ವಹಿಸಲು ಎಷ್ಟು ಉಪನ್ಯಾಸಕರು ಬೇಕಾಗುತ್ತದೆ ಎಂಬುದನ್ನು ತಿಳಿಸುವುದು

ಇ) ಈ ಎಲ್ಲಾ ವಿಷಯಗಳನ್ನು ಬೋಧಿಸಲು ಅವಧಿಗೆ ತಕ್ಕಂತೆ ಕಾರ್ಯಭಾರವನ್ನು ನಿರ್ವಹಿಸಲು ಅಗತ್ಯವಿರುವ ಉಪನ್ಯಾಸಕರು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಈ) ಈ ಕುರಿತಾಗಿ ಸರ್ಕಾರ ತುರ್ತಾಗಿ ಯಾವ ಕ್ರಮಕ್ಕೆಗೊಳ್ಳುತ್ತದೆ?

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) 15 ವಿಷಯಗಳನ್ನು ಬೋಧಿಸಲಾಗುತ್ತಿದೆ

ಆ) 28 ಉಪನ್ಯಾಸಕರು ಬೇಕಾಗುತ್ತದೆ

ಇ) 2003–04ನೇ ಸಾಲಿನ ಕಾರ್ಯಭಾರಕ್ಕನುಗುಣವಾಗಿ ಇಂಗ್ಲೀಷ್, ರಾಜ್ಯಶಾಸ್ತ್ರ, ವಾಣಿಜ್ಯಶಾಸ್ತ್ರ ಹಾಗೂ ಗಣಕ ವಿಜ್ಞಾನ ವಿಷಯ ಹೊರತುಪಡಿಸಿ ಉಳಿದೆಲ್ಲ ವಿಷಯಗಳಲ್ಲಿ ಉಪನ್ಯಾಸಕರ ಕೊರತೆ ಇಲ್ಲ

ಈ) 2004–05ನೇ ಸಾಲಿನ ಕಾರ್ಯಭಾರವನ್ನು ಪಡೆದು, ಪರಿಶೀಲಿಸಿ ಅಗತ್ಯತೆ ಇರುವ ಉಪನ್ಯಾಸಕರನ್ನು ಭರ್ತಿ ಮಾಡಲು ಪರಿಶೀಲಿಸಲಾಗುವುದು

523(619) ಶ್ರೀ ವೆಂಕಮುನಿಯಪ್ಪ ಬಿ ಪಿ (ಬೇತಮಂಗಲ) ಮಾನ್ಯ ಧರ್ಮಸಿಂಗ್ ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಕುರಿ ಸಾಕಾಣಿಕೆ ಮಾಡುವವರಿಗೆ ಶೆಡ್‌ಗಳನ್ನು ನಿರ್ಮಿಸಲು ಸಬ್ಸಿಡಿ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಬಂದಿದ್ದಲ್ಲಿ, ಇದಕ್ಕೆ ಕಾರಣಗಳೇನು

ಇ) ಕುರಿ ಸಾಕಾಣಿಕೆ ಮಾಡುವವರಿಗೆ ಸಹಾಯಧನವನ್ನು ಎಂದಿನಿಂದ ಹಾಗೂ ಎಷ್ಟು ಪ್ರಮಾಣದಲ್ಲಿ ನೀಡಲಾಗುವುದು?